ದಿನಾಂಕ: 19.12.2020 ರಂದು ಸಮಯ ಬೆಳಿಗ್ಗೆ 11.30 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ (ಅಧ್ಯಕ್ಷರು)
2. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
3. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
4. ಶ್ರೀ ರಾಜೇಶ್ ಸದಸ್ಯರು.
5. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
6. ಶ್ರೀ ಡಾ॥ ನಾಗೇಂದ್ರ ಸದಸ್ಯರು.
7. ಶ್ರೀ ವೆಂಕಟೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
8. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
9. ಶ್ರೀ ಛಾಯಾಪತಿ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
10. ಶ್ರೀ ರಾಜಶೇಖರ್ ಕಿರಿಯ ಅಭಿಯಂತರರು, ಬೆಸ್ಕಾಂ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
11. ಶ್ರೀ ಶಿವರಾಂ ವಲಯ ಅರಣ್ಯಾ ಸಂರಕ್ಷಣಾಧಿಕಾರಿಗಳು ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
12. ಶ್ರೀ ಬಾಸ್ಕರ್ ಕಂದಾಯ ವಸೂಲಿಗಾರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಓದಿ ತಿಳಿಸಿದರು.
2. ಮಾನ್ಯ ಆಧ್ಯಕ್ಷರು ಹಾಗೂ ಮಾನ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಗಳನ್ನು ಸಭೆಗೆ ತಿಳಿಸುವಂತೆ ಸೂಚಿಸಿದರು.
3. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಶಂಕರನಗರ 5ನೇ ಮುಖ್ಯರಸ್ತೆಯಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿರುವ ಬಗ್ಗೆ ತಿಳಿಸಿದರು. ಸಂಬಂದಪಟ್ಟ ಅಧಿಕಾರಿಗಳು ಇನ್ನೂ ಸಭೆಗೆ ಹಾಜರಾಗಿಲ್ಲದ ಕಾರಣ ಮಾನ್ಯ ಅಧ್ಯಕ್ಷರು ಸಭೆಗ ಪತ್ರದ ಮುಖೇನ ಸಮಸ್ಯೆಯನ್ನು ಸಲ್ಲಿಸಿ. ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ರವಾನಿಸಿ ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ತಿಳಿಸಿದರು.
4. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ಗಜಾನನ ಸ್ಲಂ, ಗೌತಮನಗರ ದೀನ್ ಬಂದನ್ ನಗರದ ರಸ್ತೆಗಳಲ್ಲಿ ಕಸದ ಆಟೋ ಬರುತ್ತಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಶ್ರೀ ಛಾಯಾಪತಿ ರವರಿಗೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಿದರು.
5. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋವಿಡ್–19 ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ತಿಳಿಸಿ ಎಂದು ಕೋರಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಕೋವಿಡ್–19 ಸಂಬಂಧಿತ ಮಾಹಿತಿಯನ್ನು ಸಭೆಗೆ ಓದಿ ತಿಳಿಸಿದರು.

Scanned with CamScanner

6. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಹಿಂದಿನ ಸಭೆಯಲ್ಲಿ ಕೋರಿದ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡಲಾಗುವುದು ಎಂದು ತಿಳಿಸಿದರು ಅದರಂತೆ ನೀಡುವಂತೆ ತಿಳಿಸಿದರು. ಆದರೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರು ಸಭೆಗೆ ಹಾಜರಿರಲಿಲ್ಲ.
7. ವಾರ್ಡ್ ಅಭಿಯಂತರರು ಬೆಸ್ಕಾಂ ರವರು ಕೇಬಲ್ ಅಳವಡಿಸಲು ರಸ್ತೆ ಅಗೆತವನ್ನು ಮಾಡಿರುವ ಬಗ್ಗೆ ಸಭೆಗೆ ತಿಳಿಸಿದರು ಹಾಗೂ ರಸ್ತೆ ಅಗೆತವನ್ನು ಕೂಡಲೇ ಮುಚ್ಚಬೇಕು ಎಂದು ಸೂಚಿಸಿದರು. ಮಾನ್ಯ ಅಧ್ಯಕ್ಷರು ರಸ್ತೆ ಅಗೆತಕ್ಕೆ ಅನುಮತಿ ಪಡೆದಿರುವಿರ ಎಂದು ಕೇಳಿದರು. ಬೆಸ್ಕಾಂ ಅಧಿಕಾರಿ ರವರು ಹೌದು ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ಅನುಮತಿ ಪಡೆದ ಪ್ರತಿಯನ್ನು ನೀಡುವಂತೆ ತಿಳಿಸಿದರು ಮತ್ತು ಕಾಮಗಾರಿಯನ್ನು ನಿರ್ವಹಿಸುವ ಮುಂಚೆ ಸಂಬಂದಪಟ್ಟ ವಾರ್ಡ್ ಅಭಿಯಂತರರು (ಕಾಮಗಾರಿ ಇಲಾಖೆ) ರವರ ಗಮನಕ್ಕೆ ತರಬೇಕು ಎಂದು ತಿಳಿಸಿದರು.
8. ಶ್ರೀ ಡಾ॥ ನಾಗೇಂದ್ರ ಸದಸ್ಯರು ಕಂದಾಯ ವಸೂಲಿ ಬಾಕಿ ಇರುವ ಪಟ್ಟಿಯನ್ನು ನಾನು ಈ ಹಿಂದೆ ಸಭೆಯಲ್ಲಿ ಕೋರಲಾಗಿತ್ತು ಸಂಬಂಧಪಟ್ಟ ಅಧಿಕಾರಿಗಳು ನೀಡುತ್ತೇವೆ ಎಂದು ತಿಳಿಸಿದ್ದರು ಎಂದರು. ಇದಕ್ಕೆ ಮಾನ್ಯ ಕಂದಾಯ ವಸೂಲಿಗಾರರು ರವರು ಕಟ್ಟಡಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಲಾಗಿರುತ್ತದೆ. ಖಾಲಿ ನಿವೇಶನಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡುತ್ತೇನೆ ಎಂದು ತಿಳಿಸಿದರು.
9. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ವಾರ್ಡ್‌ನಲ್ಲಿ ಜೋತು ಬಿದ್ದ ಕೇಬಲ್‌ಗಳನ್ನು ತಗಿಸುವಂತೆ ಸೂಚಿಸಲಾಗಿರುತ್ತದೆ ಇದಕ್ಕೆ ಸಂಬಂಧಿಸದಂತೆ ಕೈಗೊಂಡ ಕ್ರಮದ ಬಗ್ಗೆ ಕೇಳಿದರು. ಇದಕ್ಕೆ ಬೆಸ್ಕಾಂ ಅಧಿಕಾರಗಳು ಕೇಬಲ್‌ಗಳನ್ನು ತೆರವುಗೊಳಿಸಲಾಗಿತ್ತು, ಆದರೆ ಮತ್ತೆ ಅಳವಡಿಸಿರುತ್ತಾರೆ. ಆದ್ದರಿಂದ ಈ ವಾರದಲ್ಲಿ ವಾರ್ಡ್ ಅಭಿಯಂತರರು ಮತ್ತು ನಮ್ಮ ಇಲಾಖೆ ರವರು ಸಮಯ ನಿಗದಿ ಪಡಿಸಿ ತೆಗೆಯಲಾಗುವುದು ಎಂದು ತಿಳಿಸಿದರು.
10. ಮಾನ್ಯ ಅಧ್ಯಕ್ಷರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸದಂತೆ ಹಲವು ಸಮಸ್ಯೆಗಳು ಇರುತ್ತದೆ ಆದರೆ ಸಂಬಂದಪಟ್ಟ ಅಧಿಕಾರಿಗಳು ಹಾಜರಿಲ್ಲದ ಕಾರಣ ನೋಟೀಸ್ ಜಾರಿ ಮಾಡಲಾಗುವುದ ಎಂದು ತಿಳಿಸಿದರು.
11. ಮಾನ್ಯ ಅಧ್ಯಕ್ಷರು ಕಂದಾಯ ವಸೂಲಿಗಾರರಿಗೆ ವಾರ್ಡ್‌ನಲ್ಲಿ ಒಟ್ಟು ಎಷ್ಟು ಕಟ್ಟಡಗಳಿವೆ, ಎಷ್ಟು ಖಾಲಿ ನಿವೇಶನಗಳಿವೆ ಎಂಬ ಮಾಹಿತಿಯನ್ನು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೀಡಲು ಸೂಚಿಸಿದರು ಇದರಿಂದ ಪೌರಕಾರ್ಮಿಕರನ್ನು ನಿಯೋಜಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಕಂದಾಯ ವಸೂಲಿಗಾರರು ನೀಡುತ್ತೇನೆ ಎಂದು ಸಭೆಗೆ ತಿಳಿಸಿದರು.
12. ಮಾನ್ಯ ಕಾರ್ಯದರ್ಶಿಗಳು ಟೋಯೋಟ ಶೊರೂಂ ಹತ್ತಿರ ಇರುವ ಬಿಬಿಎಂಪಿ ಜಾಗದಲ್ಲಿ ಕ್ರಮವಾಗಿ ನಿರ್ಮಾಣ ಮಾಡಿಕೋಂಡಿರುವ ಶೆಡ್‌ಗಳನ್ನು ತೆರವುಗೊಳಿಸ ಬೇಕು ಎಂದು ಹಿಂದಿನ ಸಭೆಯಲ್ಲಿ ಒಂದು ಸಮಯ ನಿಗದಿಪಡಿಸಿ ನಾವೆಲ್ಲರು ಮತ್ತು ಪೋಲೀಸ್ ಇಲಾಖೆಯವರೊಂದಿಗೆ ಸ್ಥಳಕ್ಕೆ ಬೇಟಿ ನೀಡಿ ತೆರವುಗೊಳಿಸೋಣ ಎಂದು ತೀರ್ಮಾನಿಸಲಾಗಿರುತ್ತದೆ ಅದರಂತೆ ದಿನಾಂಕ:21.12.2020 ರಂದು ಅಪರಾಹ್ನ ಸ್ಥಳಕ್ಕೆ ಬೇಟಿ ನೀಡಿ ತೆರವುಗೊಳಿಸೋಣ ಎಂದು ಸಭೆಗೆ ತಿಳಿಸಿದರು.
13. ಮಾನ್ಯ ಕಾರ್ಯದಶಿಗಳು ಪಾರ್ಕ್ ಹತ್ತಿರ ಪುಂಡರ ಹಾವಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ಪೋಲೀಸ್ ಇಲಾಖೆ ರವರಿಗೆ ಕೇಳಿದರು ಇದಕ್ಕೆ ಮಹಾಲಕ್ಷ್ಮೀಪುರ ಪೋಲೀಸ್ ಠಾಣೆ ಅಧಿಕಾರಿರವರು ಪ್ರತಿದಿನ ಬೀಟ್ ಕಳುಹಿಸಲಾಗುತ್ತಿರುತ್ತದೆ ಎಂದು ತಿಳಿಸಿದರು.
14. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ವಾರ್ಡ್‌ನಲ್ಲಿ ಕೊಳವೆ ಬಾವಿಗಳಿಗೆ ಸಂಬಂದಪಟ್ಟಂತೆ ಚಾಲ್ತಿಯಲ್ಲಿರುವ ಕೊಳವೆ ಬಾವಿ, ಹಾಳಾಗಿರುವ ಕೊಳವೆ ಬಾವಿಗಳ ಮಾಹಿತಯನ್ನು ನೀಡುವಂತೆ

Scanned with CamScanner

ಸಭೆಯಲ್ಲಿ ಕೋರಿದರು. ಇದಕ್ಕೆ ಸಂಬಂಧಿಸಿದಂತೆ ವಾರ್ಡ್ ಅಭಿಯಂತರರು ಮಾಹಿತಯನ್ನು ಈಗಾಗಲೇ ಪಟ್ಟಿಮಾಡಲಾಗಿರುತ್ತದೆ. ಸದರಿ ಪಟ್ಟಿಯನ್ನು ನೀಡುತ್ತೇನೆ ಎಂದು ತಿಳಿಸಿದರು.

15. ಶ್ರೀ ರಾಜೇಶ್ ಸದಸ್ಯರು ರವರು ತುಂಬಾ ವಾಹನದ ಅಪಘಾತಗಳು ಅಗುತ್ತಿರುತ್ತವೆ ಆದ್ದರಿಂದ ರಸ್ತೆ ಹಂಪ್ಸ್‌ಗಳನ್ನು ನಿರ್ಮಿಸಬೇಕೆ ಎಂದು ಪತ್ರದ ಮುಖೇನ ಸಭೆಗೆ ಸಲ್ಲಿಸಿರುತ್ತಾರೆ. ಮಾನ್ಯ ಕಾರ್ಯದರ್ಶಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನಿಸಿ ನಿರ್ಮಿಸಲು ಸೂಚಿಸಲಾಗುವುದು ಎಂದು ತಿಳಿಸಿದರು.
16. ಬೀದಿ ದೀಪಗಳ ನಿರ್ವಹಣೆ ಸಂಬಂಧಿಸಿದಂತೆ ಹಲವು ಸಮಸ್ಯೆ ಇರುತ್ತದೆ ಆದರೆ ಸದರಿ ಇಲಾಖೆಯವತಿಯಿಂದ ಸಂಬಂಧಿಸಿದ ಯಾವುದೇ ಅಧಿಕಾರಿಗಳು ಹಾಜರಿಲ್ಲದ ಕಾರಣ ಸದರಿ ಇಲಾಖೆಯ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.
17. ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು

K. [signature]

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44

ಮಾರಪ್ಪನಪಾಳ್ಯ

Scanned with CamScanner